**ದಿಃ 26-03-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯ

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ ಆರ್ ಎಸ್ ವಕೀಲರಿಂದ**

ನಾನು ಈ ದಿನ ನನ್ನ ಎರಡು ಛಾಯಾಚಿತ್ರ ಮತ್ತು ಅದರ ಸಿಡಿ ಹಾಜರುಪಡಿಸಿದ್ದು ಅದನ್ನು ಗುರುತಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಎರಡು ಛಾಯಾಚಿತ್ರಗಳನ್ನು ಒಟ್ಟಿಗೆ ನಿಪಿ-21 ಎಂದು ಗುರುತಿಲಾಯಿತು. ಮತ್ತು ಸಿಡಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 2 ನೇ ಎದುರುದಾರ ಪರ ವಕೀಲರಾದ ಶ್ರೀ ಕೆ ಎಸ್ ಎ ವಕೀಲರಿಂದ

ಮೋಟಾರು ಸೈಕಲು ನಂಬ್ರ ಕೆಎ-20-ಇಡಿ-4151 ಇದು ನನ್ನ ಅಣ್ಣ ಮಂಜುನಾಥ ಇವನ ಮಾಲೀಕತ್ವದಲ್ಲಿದೆ ಎಂದರೆ ಸರಿ. ಸದ್ರಿ ಮೋಟಾರು ಸೈಕಲಿಗೆ ದಿಃ08-05-2019 ಕ್ಕೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿ ಅಲ್ಲಾ. ಸದ್ರಿ ದಾಖಲಾತಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ಈ ಅಪಘಾತದಲ್ಲಿ ಕಂಟೇನರ್ ಲಾರಿ ಕೆಎ-19-ವಿ-9862 ಇದಕ್ಕೆ ಯಾವುದೇ ಜಖಂ ಆಗಿಲ್ಲ ಎಂದರೆ ಸಾಕ್ಷಿ ಅದರ ಬಾಡಿಗೆ ಮೋಟಾರು ಸೈಕಲು ತಾಗಿರುತ್ತದೆ ಅಂತ ನುಡಿಯುತ್ತಾರೆ. ನಿಪಿ-6 ರಲ್ಲಿ ಏನು ಬರೆದಿದ್ದಾರೆ ಎಂಬ ವಿಷಯ ನನಗೆ ತಿಳಿದಿಲ್ಲ. ಅಪಘಾತ ಆದಂತಹಾ ಸ್ಥಳದಲ್ಲಿ ರಸ್ತೆ ತಿರುವಾಗಿತ್ತು ಎಂದರೆ ಸರಿ. ಅಪಘಾತ ಆದ ಬಗ್ಗೆ ನಾನಾಗಲೀ ನಮ್ಮ ಮೋಟಾರು ಸೈಕಲಿನ ಸಹ ಸವಾರನಾಗಲೀ ಫಿರ್ಯಾದಿ ನೀಡಿಲ್ಲ ಎಂದರೆ ಸರಿ. ಅಪಘಾತ ಸಮಯದಲ್ಲಿ ಬೈಕನ್ನು ನಾನು ಚಲಾಯಿಸುತ್ತಿದ್ದೆ. ಈ ಪ್ರಕರಣದ ಫಿರ್ಯಾದಿದಾರ ಯಾವುದೇ ಅಪಘಾತ ನೋಡಿಲ್ಲ ಎಂದರೆ ಸರಿ ಅಲ್ಲಾ.

ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನನಗೆ ಆದಂತಹ ಗಾಯಗಳ ಎಲ್ಲಾ ಚಿಕಿತ್ಸೆ ಮುಗಿದಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ರೂಃ90,000-00 ಹಣ ಸಂಪೂರ್ಣ ಸುರಕ್ಷಾ ಯೋಜನೆ ಅಡಿಯಲ್ಲಿ ಪಾವತಿಯಾಗಿರುತ್ತದೆ. ನಿಪಿ-19 ರ ಕ್ರಮ ಸಂಖ್ಯೆ 10, 13, 14, 15, 17, 18, 19, 20 ಬಿಲ್ಲುಗಳು ಹಣ ಪಾವತಿ ಮಾಡಿದ ಬಿಲ್ಲುಗಳು ಆಗಿರುವುದಿಲ್ಲ ಎಂದರೆ ಸರಿ ಅಲ್ಲಾ. ದಿನಾಂಕಃ27-05-2019 ಮತ್ತು 29-05-2019 ರಂದು ನಾನು ದುರ್ಗಾ ಆಸ್ಪತ್ರೆ ಹಾಲಾಡಿ ಇಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನಾನು ಮಣಿಪಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ

ಪಡೆದುಕೊಳ್ಳುತ್ತಿದ್ದೆ. ನಿಪಿ-17 ರಲ್ಲಿ ಹೇಳಿದಷ್ಟು ಅಂಗನ್ಯೂನ್ಯತೆ ನನಗೆ ಆಗಿಲ್ಲ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಪೌಷ್ಟಿಕ ಆಹಾರಕ್ಕೆ, ಪ್ರಯಾಣಕ್ಕೆ, ಔಷಧಿಗೆ ಮತ್ತು ಪರಿಚಾರಕರಿಗೆ ಅಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸರಿ ಅಲ್ಲಾ. ನಾನು ಈಗ ಮನೆಯಲ್ಲೆ ಡೈನಿಂಗ್ ಟೇಬಲ್ ಮೇಲೆ ಊಟ ಮಾಡುತ್ತೇನೆ ಎಂದರೆ ಸರಿ. ನನ್ನ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲಾ. ನಾನು ಹೇಳಿದಂತಹಾ ಸ್ಥಳದಲ್ಲಿ ಮತ್ತು ಸ್ಥಳ ಮಹಜರಿನಲ್ಲಿ ಕಾಣಿಸಿದ ಸ್ಥಳದಲ್ಲಿಯೂ ಸಹಾ ಈ ಅಪಘಾತ ಆಗಿಲ್ಲ ಎಂದರೆ ಸರಿ ಅಲ್ಲಾ. ತಿರುವಾದ ರಸ್ತೆಯಲ್ಲಿ ಬೈಕು ಚಲಾಯಿಸಿಕೊಂಡು ಹಿಂದುಗಡೆ ಕುಳಿತುಕೊಂಡಂತಹಾ ವ್ಯಕ್ತಿಯ ಜೊತೆಯಲ್ಲಿ ಮಾತನಾಡುತ್ತಾ ಹೋಗುತ್ತಾ ನಾನೇ ಮುಂದೆ ಬರುವಂತಹಾ ಲಾರಿಯನ್ನು ಗಮನಿಸದೇ ಲಾರಿಗೆ ಬೈಕು ಗುದ್ದಿ ನಾನೇ ಅಪಘಾತಪಡಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನನ್ನ ಅಣ್ಣನ ಸಹಾಯದಿಂದ ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹಾ ಲರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**